ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 28.03.2025.

**ಪಾಟೀ ಸವಾಲುಃ** ವಾದಿಯರ ಪರ ಶ್ರೀ ಎ.ಡಬ್ಲ್ಯೂ .ಎ. ವಕೀಲರಿಂದಃ

ಸೈಯದ್ ಖ್ರು ಷಿದ್ ಅಲಿ ರವರು ನನಗೆ ಪರಿಚಯ ಇರುತ್ತಾರೆ. ಅವರು 2001ರಲ್ಲಿ ತಿರಿಕೊಂಡಿರುತ್ತಾರೆ. ಸೈಯದ್ ಖ್ರು ಷಿದ್ ಅಲಿ ರವರಿಗೆ ಒಟ್ಟು 5 ಜನ ಮಕ್ಕಳು, ಅವರ ಪೈಕಿ ಇಬ್ಬರು ಗಂಡು ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ಹೆಣ್ಣು ಮಕ್ಕಳ ಹೆಸರು ತಲಾತ್ ಬೇಗಂ ಮತ್ತು ಸುಫಿಯಾ ಬೇಗಂ ಹಾಗೂ ಕೈಸರ್ ಬೇಗಂ ಇರುತ್ತದೆ. ಸೈಯದ್ ಫುರಾಕನ್ ಮತ್ತು ಸೈಯದ್ ಇರಾಫಾನ್ ಗಂಡು ಮಕ್ಕಳು ಇರುತ್ತಾರೆ. ಅವರ ಪೈಕಿ ಸೈಯದ್ ಇರಾಫಾನ್ ರವರು 4 ವರ್ಷದ ಹಿಂದೆ ತಿರಿಕೊಂಡಿರುತ್ತಾರೆ. ವಾದಿಯರ ಮತ್ತು ಪ್ರತಿವಾದಿಯರ ಖಾಯಂ ವಾಸ ಹೆಬಳಿ ಗ್ರಾಮ ಇರುತ್ತದೆ. ನಾನು ಖಾಯಂ ಆಗಿ ಮಟಕಿ ಗ್ರಾಮದಲ್ಲಿ ಇರುತ್ತೇನೆ. ನನ್ನ ಹಾಗೂ ವಾದಿಯರ ಮೂಲ ಪುರುಷ ಸೈಯದ್ ಖ್ರು ಷಿದ್ ಅಲಿ ಮಧ್ಯ ಯಾವುದೇ ಸಂಬಂಧ ಇರುವುದಿಲ್ಲ, ಆದರೆ ಅವರು ಮಟಕಿ ಗ್ರಾಮದಲ್ಲಿ ಆರ್‌ಎಂಪಿ ವೈದ್ಯಕಿಯ ಸೇವೆ ಸಲ್ಲಿಸುತ್ತಿದ್ದರು. ಅವರ ದವಾಖಾನೆ ಹೆಸರು ಇರಲಿಲ್ಲ. ಅವರು ಯಾವ ವೈದ್ಯಕಿಯ ಪದವಿ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಅವರು ವೈದ್ಯಕಿಯ ಪದವಿ ಪಡೆದ ಬಗ್ಗೆ ನಾನು ದಾಖಲಾತಿ ನೋಡಿಲ್ಲ.

ನಾನು ಹೇಳಿದ ಹಾಗೇ ಸೈಯದ್ ಖ್ರು ಷಿದ್ ಅಲಿ ರವರು ಮಟಕಿ ಗ್ರಾಮದಲ್ಲಿ ವೈದ್ಯರು ಇದ್ದರು ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಸೈಯದ್ ಖ್ರು ಷಿದ್ ಅಲಿ ರವರು ನಮ್ಮ ಊರಿಗೆ ಯಾವತ್ತು ಬಂದಿರಲಿಲ್ಲ ಹಾಗೂ ವೈದ್ಯಕಿಯ ಸೇವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. 2ನೇ ವಾದಿ ಮುಂಬೈಯಲ್ಲಿ ಇರುತ್ತಾರೆ ಎಂದರೆ ಸರಿ. 2ನೇ ವಾದಿ ಗಂಡ ಅಬ್ದುಲ್ ರೌಫ್ ತನ್ನ ವ್ಯಾಪಾರ ವೈವಾಟವನ್ನು ಮುಂಬೈಯಲ್ಲಿ ಮಾಡುತ್ತಾರೆ ಎಂದರೆ ಸರಿ. 2ನೇ ವಾದಿ ಗಂಡ ಅಬ್ದುಲ್ ರೌಫ್ ರವರು ನಾನು 30 ವರ್ಷ ಇರುವಾಗಿನಿಂದಲೂ ಅವರು ಮುಂಬೈಯಲ್ಲಿ ವಾಸವಿರುತ್ತಾರೆ. 2ನೇ ವಾದಿ

ಗಂಡ ಅಬ್ದುಲ್ ರೌಫ್ ರವರು ತನ್ನ ವ್ಯಾಪಾರ ವ್ಯೆವಾಟವನ್ನು ಮುಂಬೈಯಲ್ಲಿ ಮಾಡುತ್ತಾರೆ ಹಾಗೂ ಖಾಯಂವಾಗಿ ಮುಂಬೈಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. 2ನೇ ವಾದಿ ಗಂಡ ಅಬ್ದುಲ್ ರೌಫ್ ರವರ ಆರ್ಥಿಕ ಸ್ಥಿತಿ ಚೆನ್ನಾಗಿ ಇದೆ ಎಂದರೆ ಸರಿ.

2ನೇ ವಾದಿ ಗಂಡ ಅಬ್ದುಲ್ ರೌಫ್ ಹಾಗೂ ಪ್ರತಿವಾದಿಯರ ಮದ್ಯ ಯಾವುದೇ ಗಲಾಟೆಯಾಗಿರುವುದಿಲ್ಲ. ಸೈಯದ್ ಖುಷಿದ್ ಅಲಿ ರವರಿಗೆ ಸರ್ವೆ ನಂ.80ರಲ್ಲಿ ಒಟ್ಟು 8 ಎಕರೆ ಚಿಲ್ಲರೆ ಗುಂಟೆ ಜಮೀನು ಇತ್ತು ಹಾಗೂ 81ರಲ್ಲಿ 2 ಎಕರೆ ಚಿಲ್ಲರೆ ಗುಂಟೆ ಜಮೀನು ಇರುತ್ತದೆ. ಸರ್ವೆ ನಂ.81ರ ಸಂಪೂರ್ಣ ಜಮೀನು ಸೈಯದ್ ಖುಷಿದ್ ಅಲಿ ರವರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸರ್ವೆ ನಂ.81ರಲ್ಲಿ 2 ಎಕರೆ ಮಾತ್ರ ಸೈಯದ್ ಖುಷಿದ್ ಅಲಿಗೆ ಇತ್ತು. ಸೈಯದ್ ಖುಷಿದ್ ಅಲಿ ರವರು ತಿರಿಕೊಂಡ ನಂತರ ಸರ್ವೆ ನಂ.81ರಲ್ಲಿರುವ 2 ಎಕರೆ ಜಮೀನನ್ನು 1 ಮತ್ತು 2ನೇ ಪ್ರತಿವಾದಿ ಹೆಸರಿನಲ್ಲಿ ಮ್ಯೂಟೇಷನ್ ಆಗಿರುತ್ತದೆ. ಸಾಕ್ಷಿ ಮುಂದುವರೆದು ಮ್ಯೂಟೇಷನ್ ಕಾಲಕ್ಕೆ 1 ಮತ್ತು 2ನೇ ಪ್ರತಿವಾದಿಯರು ತಮ್ಮ ಹೆಣ್ಣು ಮಕ್ಕಳಿಗೆ ತಲಾ ರೂ.50,000/- ಹಣವನ್ನು ಮೂರು ಜನ ಹೆಣ್ಣು ಮಕ್ಕಳಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಮೂಟೇಷನ್ ಹಾಗೂ ಹಣ ಕೊಟ್ಟ ದಿನಾಂಕ ನನಗೆ ಗೊತ್ತಿಲ್ಲ. ತಲಾ ರೂ.50,000/- ಹಣ ಕೊಟ್ಟ ಬಗ್ಗೆ ಪ್ರತಿವಾದಿಯರು ಯಾವುದೇ ಪ್ರತ್ಯಕ ರಶೀದಿಯನ್ನು ತೆಗೆದುಕೊಂಡಿರುವುದಿಲ್ಲ. ಮ್ಯೂಟೇಷನ್ ಮಾಡಿಕೊಳ್ಳುವ ಸಲುವಾಗಿ ಯಾವುದೇ ದಾಖಲೆಗಳು ಆಗಿರುವುದಿಲ್ಲ. ನಾನು ಈ ದಾವೆಯಲ್ಲಿ ಪಾರ್ಟಿ ಇರುವುದಿಲ್ಲ. ನನಗೆ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಓದಿ ಹೇಳಲು ಬರುವುದಿಲ್ಲ, ಏಕೆಂದರೆ ನಾನು ಅನಕ್ಷರಸ್ಥ, ಆದರೆ ಅದರಲ್ಲಿ ಬರೆದ ಸಂಗತಿಗಳು ಗೊತ್ತಿದೆ. ಮೇಲೆ ಹೇಳಿದಂತೆ ಹಣವನ್ನು ನನ್ನ ಸಮಕ್ಷಮ ಕೊಟ್ಟಿರುತ್ತಾರೆ ಹಾಗೂ ತಂದೆ ಹೆಸರಿನಲ್ಲಿದ್ದ ಆಸ್ತಿಗಳನ್ನು ಇಬ್ಬರು ಪ್ರತಿವಾದಿಯರು ತಮ್ಮ

ಹೆಸರಿನಲ್ಲಿ ಮ್ಯೂಟೇಷನ್ ಮಾಕಡಿಕೊಂಡಿರುತ್ತಾರೆ ಎಂಬುವುದರ ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿಲ್ಲ.

ಸರ್ವೆ ನಂ.80ರ ಜಮೀನು ಸೈಯದ್ ಖುಷಿದ್ ಅಲಿ ರವರು ತಮ್ಮ ಜೀವಂತ ಕಾಲಕ್ಕೆ ಯಾವುದೇ ರೀತಿ ಅಡಮಾನ ಮಾಡಿರಲಿಲ್ಲ ಹಾಗೂ ಯಾರಿಗೂ ಮಾರಾಟ ಮಾಡಿರಲಿಲ್ಲ. ಸರ್ವೆ ನಂ.80ರಲ್ಲಿ 4 ಎಕರೆ ಜಮೀನು ಇತ್ತು, ಆ ಪೈಕಿ 2ನೇ ವಾದಿ ಗಂಡ, 1 ಮತ್ತು 2ನೇ ಪ್ರತಿವಾದಿಯರಿಗೆ ತಲಾ 2 ಎಕರೆ ಜಮೀನು ಕೊಟ್ಟಿರುತ್ತಾರೆ. ಸರ್ವೆ ನಂ.80ರ 4 ಎಕರೆ ಜಮೀನು ಅಬ್ದುಲ್ ರೌಫ್ ರವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಮೇಲೆ ಹೇಳಿದ ತಲಾ 2 ಎಕರೆ ಜಮೀನನ್ನು ಅಬ್ದುಲ್ ರೌಫ್ ರವರು ಪ್ರತಿವಾದಿಗಳಿಗೆ ಯಾವತ್ತು ಕೊಟ್ಟಿರುತ್ತಾರೆ ಎಂದು ನನಗೆ ತಾರಿಕು ಗೊತ್ತಿಲ್ಲ. ಆ ಬಗ್ಗೆ ನನ್ನ ಸಮಕ್ಷಮ ಕಾಗದ ಪತ್ರಗಳನ್ನು ಬರೆದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 1 ಮತ್ತು 2ನೇ ಪ್ರತಿವಾದಿಗಳಿಗೆ ತಲಾ 2 ಎಕರೆ ಜಮೀನನ್ನು ನನ್ನ ಸಮಕ್ಷಮ ಕೊಟ್ಟ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಆ ಬಗ್ಗೆ ಯಾವುದೇ ಸಂಗತಿ ಬರೆಯದೇ ಇದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಮೇಲೆ ಹೇಳಿದ ತಲಾ 2 ಎಕರೆ ಜಮೀನನ್ನು ಕಾಶಿನಾಥ ಮತ್ತು ಅನ್ಸಾರ ಸಾಬ ರವರ ಸಮಕ್ಷಮ ಕೊಟ್ಟಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ, ಸಾಕ್ಷಿ ಅನ್ಸಾರ ಸಾಬ ರವರು ನನ್ನ ತಂದೆ ಹಾಗೂ ನಾನು ಅಲ್ಲಿಯೇ ಇದ್ದೆ ಎಂದು ನುಡಿಯುತ್ತಾರೆ. ನಾನು ಅಲ್ಲಿಯೇ ಇದ್ದೆ ಎಂದು ಬರೆದಿಲ್ಲ ಎಂದರೆ ಸರಿ. 1993ರಲ್ಲಿ ನನಗೆ ವಯಸ್ ಇತ್ತು ಎಂದು ಗೊತ್ತಿಲ್ಲ. ಸರ್ವೆ ನಂ.80ರಲ್ಲಿ ಸೈಯದ್ ಖುಷಿದ್ ಅಲಿ ರವರು ತನ್ನ ಇಬ್ಬರು ಮಕ್ಕಳಿಗೆ ತಲಾ 4 ಎಕರೆ ಜಮೀನನ್ನು ಕೊಟ್ಟ ತಾರಿಕು ನನಗೆ ನೆನಪು ಇಲ್ಲ. ಸದರಿ 4 ಎಕರೆ ಜಮೀನುಗಳನ್ನು ಸೈಯದ್ ಖುಷಿದ್ ಅಲಿ ರವರು ತನ್ನ ಇಬ್ಬರು ಮಕ್ಕಳಿಗೆ ಕೊಟ್ಟ ಬಗ್ಗೆ ಯಾವುದೇ ದಾಖಲೆಯನ್ನು ಆ ದಿನ ಬರೆದಿರುವುದಿಲ್ಲ.

ಸಾಕ್ಷಿ ಮುಂದುವರೆದು ಮೌಖಿಕವಾಗಿ ಹಿಭಾ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ಅನ್ಸಾರ ಸಾಬ, ಕಾಶಿನಾಥ ಮತ್ತು ನಾನು ಇನ್ನು 2-3 ಜನರು ಇದ್ದರು ಅವರ ಹೆಸರು ನನಗೆ ಗೊತ್ತಿಲ್ಲ.

ಸದರಿ ಹಿಭಾವನ್ನು ಮೇಲೆ ಹೇಳಿದ ಸಾಕ್ಷಿದಾರರ ಸಮಕ್ಷಮ ಮಾಡಿಕೊಟ್ಟ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಇದ್ದೆ ಎಂಬುವುದರ ಬಗ್ಗೆ ನಾನು ಹೇಳಿ ಬರೆಯಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ನನ್ನ ಸಮಕ್ಷಮ ತಲಾ 4 ಎಕರ ಜಮೀನನ್ನು ಸೈಯದ್ ಖ್ರುಷಿದ್ ಅಲಿ ರವರು ತನ್ನ ಇಬ್ಬರು ಮಕ್ಕಳಿಗೆ ಹಿಭಾ ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ಸ್ನೇಹಿತ ಎಂದರೆ ಸರಿ. 1ನೇ ಪ್ರತಿವಾದಿ ಹೇಳಿದ ಮೇರೆಗೆ ನಾನು ಆತ ಹೇಳಿದಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ 1 ಮತ್ತು 2ನೇ ಪ್ರತಿವಾದಿಯರು ಮ್ಯೂಟೇಷನ್ ಮಾಡಿಕೊಳ್ಳುವ ಕಾಲಕ್ಕೆ ತಮ್ಮ ಮೂರು ಜನ ಹೆಣ್ಣು ಮಕ್ಕಳಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ ಹಾಗೂ ಅವರ ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಅದೇ ರೀತಿ ಸರ್ವೆ ನಂ.80ರಲ್ಲಿ 2 ಎಕರೆ ಜಮೀನನ್ನು 2ನೇ ವಾದಿ ಗಂಡ, 1 ಮತ್ತು 2ನೇ ಪ್ರತಿವಾದಿಯರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಹೇಳಿದ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ಸೈಯದ್ ಖ್ರುಷಿದ್ ಅಲಿ ರವರು ತಿರಿಕೊಂಡ ನಂತರ ಆತನ ಆಸ್ತಿಯ ಬಗ್ಗೆ ವಾದಿ ಮತ್ತು ಪ್ರತಿವಾದಿಯರಲ್ಲಿ ಇವತ್ತಿಗೂ ಯಾವುದೇ ವಾಟ್ನಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ವಾಟ್ನಿಯಾದ ಬಗ್ಗೆ ಯಾವುದೇ ದಾಖಲೆ ಬರೆದಿಲ್ಲ, ಆದರೆ ಹಣ ಕೊಟ್ಟ ನಂತರ ರಾಜಿ ಮಾಡಿಕೊಂಡಿರುತ್ತಾರೆ ಎಂದು ನಡಿಯುತ್ತಾರೆ. ರಾಜಿ ಪತ್ರ ಕೂಡಾ ಬರೆದಿರುವುದಿಲ್ಲ. ನಾನು ಹೇಳಿದಂತೆ ರಾಜಿ ಪತ್ರ ಮತ್ತು ವಾಟ್ನಿ ಪತ್ರ ಯಾವುದೇ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ಕೂಡಾ ವಾದಿಯರು ಮತ್ತು ಪ್ರತಿವಾದಿಯರು ದಾವಾ ಸ್ವತ್ತುಗಳಲ್ಲಿ ಜಂಟಿ ಕಬ್ಜೆ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನಗೆ ಪ್ರಕರಣದಲ್ಲಿ ಯಾವುದೇ ಮಾಹಿತಿ ಇರದೇ ಇದ್ದರೂ ಕೂಡಾ 1ನೇ ಪ್ರತಿವಾದಿ ಮಾತು ಕೇಳಿ ಈ ದಿನ ನ್ಯಾಯಾಲಯಕ್ಕೆ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಮೇಲೆ ಹೇಳಿದ ಘಟನೆಗಳು ನನ್ನ ಸಮಕ್ಷಮ ಆಗಿರುತ್ತವೆ ಎಂದು ಹೇಳಿದ ಸಂಗತಿ ಸುಳ್ಳು ಇವೆ ಎಂದರ ಸರಿಯಲ್ಲ. ನನ್ನ ಸಮಕ್ಷಮ ಆಗಿರುತ್ತವೆ ಎಂಬುವುದಕ್ಕೆ ಯಾವುದೇ ಕಾರದ ಪತ್ರ ಇರುವುದಿಲ್ಲ ಎಂದರೆ ಸರಿ, ಆದರೆ ಮಾಹಿತಿ ಇರುತ್ತದೆ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**